SC:102/2024
PW: 02 CW:02

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 102/2024

| | |
|---|---|
| PW | 02 |
| CW | 02 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 09.10.2025.

ಸಾಕ್ಷಿಯ ಹೆಸರು : ಶ್ರೀಮತಿ ಶಾಹೀದಾ
ತಂದೆಯಹೆಸರು : ಮೊಹಮ್ಮದ್ ಬಷೀರ್
ವಯಸ್ಸು : 49 ವರ್ಷ
ಉದ್ಯೋಗ : ಗೃಹಿಣಿ
ವಾಸಸ್ಥಳ : ಬಾಗೇಪಲ್ಲಿ

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ'**

ಮೃತ ನಜೀರ್ ಅಹಮದ್ ಇವರು ನನ್ನ ದೊಡ್ಡ ಭಾವ ಮಹಬೂಬ್ ಸಾಬ್ ಇವರು ನನ್ನ ಮಗನಾಗಿರುತ್ತಾರೆ. ಮಹಬೂಬ್ ಸಾಬ್ ಇವರು ನನ್ನ ಗಂಡನ ದೊಡ್ಡ ಅಣ್ಣನಾಗಿರುತ್ತಾರೆ. ಚಾಸಾ 1 ರವರು ಮೃತ ನಜೀರ್ ಅಹಮದ್ ಇವರ ಮಗನಾಗಿದ್ದು, ಚಾಸಾ 3 ರವರು ಮೂರನೇ ಭಾವನಾಗಿದ್ದು, ಚಾಸಾ 4 ರವರು ಎರಡನೇ ಭಾವನಾಗಿದ್ದು, ಚಾಸಾ 5 ರವರು ನಜೀರ್ ಅಹಮ್ಮದ್ ಇವರ ಅಳಿಯನಾಗಿದ್ದು, ಚಾಸಾ 6 ರವರು ನನ್ನ ಎರಡನೇ ಭಾವನ ಮಗನಾಗಿದ್ದು, ಚಾಸಾ 7 ರವರನ್ನು ನೋಡಿರುತ್ತೇನೆ. ಚಾಸಾ 8 ನನ್ನ

ಮಗನಾಗಿದ್ದು, ಚಾಸಾ 11 ರಿಂದ ಚಾಸಾ 14 ರವರು ನಮ್ಮ ಗ್ರಾಮದವರಾಗಿದ್ದು, ಉಳಿದ ಸಾಕ್ಷಿದಾರರ ಪರಿಚಯ ಇಲ್ಲ.

2. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಿರುವ ಆರೋಪಿ ನನ್ನ ಯಜಮಾನರಾಗಿರುತ್ತಾರೆ. ನನಗೆ 3 ಜನ ಮಕ್ಕಳು ಜನಿಸಿರುತ್ತಾರೆ. ಆರೋಪಿ ಸೌದಿ ಅರೇಬಿಯಾದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು. ನಾನು ಮೊದಲಿಗೆ ಹಂಪಸಂದ್ರದಲ್ಲಿ ವಾಸ ಮಾಡುತ್ತಿದ್ದು, ಈಗ ಬಾಗೇಪಲ್ಲಿಯಲ್ಲಿ ವಾಸ ಇರುತ್ತೇನೆ. ನಜೀರ್ ಅಹಮದ್ ಇವರು ಹಂಪಸಂದ್ರದಲ್ಲಿ ವಾಸವಿದ್ದರು. ನನ್ನ ಅತ್ತೆ ಮಾವ ಸಂಪಾದನೆ ಮಾಡಿದ ಹಂಪಸಂದ್ರದ ಬಳಿಯಿರುವ ಲಕ್ಷ್ಮಣಪುರ ಗ್ರಾಮದಲ್ಲಿವ ವ್ಯವಸಾಯದ ಜಮೀನು ಇರುತ್ತದೆ. ಸದರಿ ಜಮೀನು ನನ್ನ ಅತ್ತೆಯ ಹೆಸರಿನಲ್ಲಿತ್ತು. ನನ್ನ ಅತ್ತೆ ನನ್ನ ದೊಡ್ಡ ಭಾವನ ಮಗನಾದ ನಜೀರ್ ಅಹಮದ್ ಇವರಿಗೆ ಹೇಳಿ ನನ್ನ ಮಗಳ ಮದುವೆಗಾಗಿ ಸದರಿ ಸ್ವತ್ತಿನ ಬಗ್ಗೆ ದಾನ ಪತ್ರ ಮಾಡಿ ಅದನ್ನು ನಜೀರ್ ಅಹಮದ್ ಹಾಗೂ ಅವರ ತಂದೆ ಮಾರಾಟ ಮಾಡಿ ಕ್ರಯದ ಹಣವನ್ನು ನನಗೆ ನೀಡಿದ್ದರು. ಆ ಸಮಯದಲ್ಲಿ ಆರೋಪಿ ಹಂಪಸಂದ್ರದಲ್ಲಿ ವಾಸವಿದ್ದು, ನನ್ನ ಜೊತೆ ಮಾತನಾಡುತ್ತಿರಲಿಲ್ಲ, ಜಮೀನಿನ ವಿಚಾರವಾಗಿ ಆರೋಪಿ ಮಹಬೂಬ್ ಸಾಬ್ ಹಾಗೂ ನಜೀರ್ ಸಾಬ್ ಇವರೊಂದಿಗೆ ಗಲಾಟೆ ಮಾಡಿಕೊಂಡಿರುತ್ತಾರೆ. ನಜೀರ್ ಅಹಮದ್ ಹಾಗೂ ಮಹಬೂಬ್ ಸಾಬ್ ದಿ.24.07.2024 ರಂದು ಮೃತ ಪಟ್ಟಿರುತ್ತಾರೆ.

ಈಗ ಮಧ್ಯಾಹ್ನ 2.00 ಗಂಟೆ ಸಮಯವಾದ ಕಾರಣ ಮುಂದುವರೆದ ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

SC:102/2024
PW: 02 CW:02

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 09.10.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

**ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಬೋಧನೆ ಮಾಡಿ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

3. ದಿಃ24.07.2024 ರಂದು ಬೆ.5.45 ರ ಸಮಯದಲ್ಲಿ ಹೈದರಾಬಾದ್ ನಲ್ಲಿರುವ ನನ್ನ ಮಗನಾದ ಅಪ್ತಾಬ್ ಆಲಮ್ ಇವರು ನನಗೆ ಫೋನ್ ಮಾಡಿ ನನ್ನ 2 ನೇ ಭಾವನ ಮಗ ರಿಯಾಜ್ ಎಂಬುವವರು ಆತನಿಗೆ ಫೋನ್ ಮಾಡಿ ಆರೋಪಿ ದೊಡ್ಡಪ್ಪ ಹಾಗೂ ಅಣ್ಣನಿಗೆ ಪಿಸ್ತೂಲಿನಿಂದ ಹೊಡೆದು ಸಾಯಿಸಿ ಬಾಗೇಪಲ್ಲಿಯ ಕಡೆ ಬರುತ್ತಿದ್ದು ನೀವು ಹುಷಾರು ಇರುವಂತೆ ತಿಳಿಸಿರುವುದಾಗಿ ನನಗೆ ಹೇಳಿರುತ್ತಾರೆ. ಅದಾದ ನಂತರ ಬೆ.6.00 ಗಂಟೆಗೆ ಆರೋಪಿ ನಮ್ಮ ಮನೆಯ ಬಳಿ ಬಂದು ಬಾಗಿಲು ತಟ್ಟಿದ್ದು ನಾನು ಬಾಗಿಲು ತೆಗೆಯದೆ ಮನೆಯ ಒಳಗೆ ಇದ್ದೆನು. ಆದರೂ ಸಹಾ ಆರೋಪಿ ಬಾಗಿಲನ್ನು ತೆಗೆಯುವಂತೆ ಹೇಳಿದ್ದು ನಾನು ತೆಗೆಯದೇ ಮನೆಯ ಒಳಗೆ ಇದ್ದೆನು. ಸ್ವಲ್ಪ ಸಮಯದ ನಂತರ ಪೊಲೀಸರು ಬಂದು ಬಾಗಿಲು ತಟ್ಟಿ ನಾವು ಪೊಲೀಸರಾಗಿದ್ದು ಹೆದರಬೇಡಿ ಬಾಗಿಲು ತೆಗೆಯುವಂತೆ ತಿಳಿಸಿದಾಗ ನಾನು ಬಾಗಿಲು ತೆಗೆದಿರುತ್ತೇನೆ.

4. ನಾನು ಬಾಗಿಲು ತೆಗೆದು ನೋಡಿದಾಗ ನಮ್ಮ ಮನೆಯ ಮುಂದೆ ಪೊಲೀಸರು ಹಾಜರಿದ್ದು ಆರೋಪಿ ಸ್ಥಳದಲ್ಲಿ ಇರಲಿಲ್ಲ. ಪೊಲೀಸರು ಆರೋಪಿಯನ್ನು ಹಿಡಿದು ಕೆಳಗೆ ಕರೆದುಕೊಂಡು ಹೋಗಿದ್ದು ನಿಮಗೆ ಭಯ ಬೇಡ ಎಂದು ನನಗೆ ತಿಳಿಸಿರುತ್ತಾರೆ. ಪೊಲೀಸರು ಆ ಸಮಯದಲ್ಲಿ ಆರೋಪಿಯ ಬಳಿ ಪೆಪ್ಪರ್ Spray, ಚಿಲ್ಲಿ Spray, ಒಂದು ಚಾಕು , ರೇಜರ್ , ಪಿಸ್ತೂಲು ಇರುವುದಾಗಿ ಹೇಳಿರುತ್ತಾರೆ. ಆರೋಪಿ ಯುಟೂಬ್ ನೋಡಿ ಪಿಸ್ತೂಲ್ ನ್ನು ಬಿಹಾರ್ ನಲ್ಲಿ ವಾಸ ಇರುವ ವ್ಯಕ್ತಿಯಿಂದ ಪಡೆದುಕೊಂಡಿರುವುದಾಗಿ ಪೊಲೀಸರು ಮಾತನಾಡುತ್ತಿದ್ದುದ್ದನ್ನು ನಾನು ಕೇಳಿಸಿಕೊಂಡಿರುತ್ತೇನೆ. ನನ್ನ ಮಗ ನನಗೆ ಫೋನ್ ಮಾಡಿದಾಗ ಆರೋಪಿ ನಜೀರ್ ಅಹಮದ್ ಗೆ ಪಿಸ್ತೂಲ್ ನಿಂದ ಹೊಡೆದು ಸಾಯಿಸಿದ್ದು , ಮೆಹಬೂಬ್ ಸಾಬ್ ಇವರ ತಲೆಗೆ ಮಚ್ಚಿನಿಂದ ಹೊಡೆದು ಸಾಯಿಸಿರುವುದಾಗಿ ನನಗೆ ತಿಳಿಸಿರುತ್ತಾರೆ. ಜಮೀನನ್ನು ಮಾರಿ ಕ್ರಯದ ಹಣವನ್ನು ನನ್ನ ಮಗಳ ಮದುವೆಗಾಗಿ ನಮಗೆ ನೀಡಿದ ದ್ವೇಷಕ್ಕಾಗಿ ಆರೋಪಿ ನಜೀರ್ ಅಹಮದ್ ಹಾಗೂ ಮೆಹಬೂಬ್ ಸಾಬ್ ಇವರನ್ನು ಕೊಲೆ ಮಾಡಿರುತ್ತಾರೆ.

5. ನಾನು ನಂತರ ನಜೀರ್ ಅಹಮದ್ ಹಾಗೂ ಮೆಹಬೂಬ್ ಸಾಬ್ ಇವರ ಮೃತ ದೇಹಗಳನ್ನು ನೋಡಿದ್ದು ಸಾಕ್ಷಿದಾರರು ನಿಪಿ.4 ರಿಂದ 10 ರ ಫೋಟೋದಲ್ಲಿರುವ ಮೃತದೇಹಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಘಟನೆಗೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ವಿ , ಮಾನ್ಯ ಡೆಪ್ಯುಟಿ ಡಿಫೆನ್ಸ್ ಕೌನ್ಸಲ್ ಇವರಿಂದ</u>**

6. ನನ್ನ ವಿವಾಹ ಆರೋಪಿಯ ಜೊತೆ ಸುಮಾರು 30 ವಷದ ಹಿಂದೆ ಆಗಿರುತ್ತದೆ. ನನ್ನ ಸ್ವಂತ ಊರು ಹಂಪಸಂದ್ರ ಗ್ರಾಮ ಆಗಿರುತ್ತದೆ. ಮೃತ ಮೆಹಬೂಬ್ ಸಾಬ್ ಇವರು ನಜೀರ್ ಅಹಮದ್ ಇವರ ತಂದೆ ಆಗಿರುತ್ತಾರೆ ಎಂದರೆ ಸರಿ . ಮೆಹಬೂಬ್ ಸಾಬ್ ಇವರು ಮೃತ ಪಟ್ಟಾಗ ಅಂದಾಜು 85 ರಿಂದ 86 ವರ್ಷ ಆಗಿತ್ತು ಎಂದರೆ ಸರಿ. ಮೆಹಬೂಬ್ ಸಾಬ್ ಹಾಗೂ ಅವರ ಸಹೋದರರ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ಭಾಗ ಆಗಿದ್ದು ಸರಿಯಾಗಿ ಭಾಗ ಆಗಿಲ್ಲ ಎಂದು ಉತ್ತರಿಸಿರುತ್ತಾರೆ. ಮೆಹಬೂಬ್ ಸಾಬ್ ಇವರಿಗೆ ವಯಸ್ಸಾಗಿದ್ದು ತನ್ನ ಕುಟುಂಬದ ಆಸ್ತಿಗಳಲ್ಲಿ ಭಾಗ ತೆಗೆದುಕೊಂಡಿಲ್ಲ ಎಂಬ ಬಗ್ಗೆ ಮೆಹಬೂಬ್ ಸಾಬ್ ಹಾಗೂ ನಜೀರ್ ಅಹಮದ್ ಇವರ ನಡುವೆ ಯಾವಾಗಲೂ ಗಲಾಟೆ ಅಗುತ್ತಿದ್ದು ಎಂದರೆ ಸಾಕ್ಷಿಯು ಆಸ್ತಿಗಳ ಬಗ್ಗೆ ನನಗೆ ಅಷ್ಟೊಂದು ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ.

7. ಆಸ್ತಿಗಳ ವಿಚಾರವಾಗಿ ಮೆಹಬೂಬ್ ಸಾಬ್ ಹಾಗೂ ನಜೀರ್ ಅಹಮದ್ ಯಾವಾಗಲೂ ಗಲಾಟೆ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ನನ್ನ ಮದುವೆ ಆಗುವ ಮೊದಲಿನಿಂದಲೂ ಸೌದಿಅರೇಬಿಯಾಕ್ಕೆ ಹೋಗಿ ಬಂದು ಮಾಡುತ್ತಿದ್ದರು. ಆರೋಪಿ ಈ ರೀತಿ ಸೌದಿಅರೇಬಿಯಾಕ್ಕೆ ಹೋಗಿ ಬಂದು ಮಾಡುತ್ತಿದ್ದ ಸಮಯದಲ್ಲಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಮೊದಲಿಗೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದು ನಂತರ

ಚೆನ್ನಾಗಿ ನೋಡಿಕೊಂಡಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಒಟ್ಟು 3 ಜನ ಮಕ್ಕಳು ಜನಿಸಿರುತ್ತಾರೆ. ನನ್ನ 3 ಜನ ಮಕ್ಕಳ ವಿಧ್ಯಾಭ್ಯಾಸಕ್ಕಾಗಿ ಆರೋಪಿ ಹಣ ಕಳುಹಿಸುತ್ತಿದ್ದರು ಎಂದರೆ ಸಾಕ್ಷಿಯು ಇಬ್ಬರ ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ಕಳುಹಿಸಿದ್ದು ಕಡೆಯ ಮಗಳ ವಿದ್ಯಾಭ್ಯಾಸಕ್ಕೆ ಹಣ ಕಳುಹಿಸಿಲ್ಲ ಎಂದು ಉತ್ತರಿಸಿರುತ್ತಾರೆ. ಆರೋಪಿ ಸೌದಿಅರೇಬಿಯಾದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಟೈಲರಿಂಗ್ ಕೆಲಸದಿಂದ ಆರೋಪಿಗೆ ಅಷ್ಟೊಂದು ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ. ಈ ರೀತಿ ಆದಾಯ ಕಡಿಮೆ ಇದ್ದ ಕಾರಣ ಸುಮಾರು 6-7 ವರ್ಷಗಳ ಕಾಲ ಆರೋಪಿ ನಮ್ಮ ಮನೆಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು 3 ವರ್ಷಗಳ ಕಾಲ ಆರೋಪಿ ಬಂದಿರಲಿಲ್ಲ ಎಂದು ಉತ್ತರಿಸಿರುತ್ತಾರೆ.

8. ಈ ರೀತಿ ಆರೋಪಿ 3 ವರ್ಷಗಳ ಕಾಲ ನಮ್ಮ ಮನೆಗೆ ಬಾರದೇ ಇದ್ದ ಸಮಯದಲ್ಲಿ ನಜೀರ್ ಅಹಮದ್ ಹಾಗೂ ಮೆಹಬೂಬ್ ಸಾಬ್ ಇವರು ನಮಗೆ ಸಹಾಯ ಮಾಡಿದ್ದರು ಎಂದರೆ ಸಾಕ್ಷಿಯು ಮೆಹಬೂಬ್ ಸಾಬ್ ಹಾಗೂ ಅವರ ತಾಯಿ ನಮಗೆ ಸಹಾಯ ಮಾಡಿದ್ದರು ಎಂದು ಉತ್ತರಿಸಿರುತ್ತಾರೆ. ಆ ಸಮಯದಲ್ಲಿ ನಾನು ಮೆಹಬೂಬ್ ಸಾಬ್ ಇವರ ಮನೆಯಲ್ಲಿ ವಾಸ ಇದ್ದೆನು ಎಂದರೆ ಸರಿಯಲ್ಲ. ಮೆಹಬೂಬ್ ಸಾಬ್, ನಜೀರ್ ಸಾಬ್ ಹಾಗೂ ಮೆಹಬೂಬ್ ಸಾಬ್ ಇವರ ತಾಯಿ ನಮ್ಮ ಕಷ್ಟಕ್ಕೆ ಆಗುತ್ತಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಘಟನೆ ಆಗಿರುತ್ತದೆ ಎಂದು ಹೇಳಿದ ಸಮಯದಲ್ಲಿ ಆರೋಪಿಯೂ ಸಹಾ ಬಾಗೇಪಲ್ಲಿಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಆಸ್ತಿಗಳ

ವಿಚಾರದಲ್ಲಿ ಹಾಗೂ ಮಕ್ಕಳನ್ನು ನಾನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ವಿಚಾರವಾಗಿ ನನಗೂ ಆರೋಪಿಗೂ ಆಗಾಗ ಗಲಾಟೆ ಆಗುತ್ತಿತ್ತು ಎಂದರೆ ಸಾಕ್ಷಿಯು ಮಕ್ಕಳ ವಿಚಾರವಾಗಿ ಮಾತ್ರ ಗಲಾಟೆ ಆಗುತ್ತಿತ್ತು ಎಂದು ಉತ್ತರಿಸಿರುತ್ತಾರೆ.

9. ಆರೋಪಿಗೆ ಆದಾಯ ಕಡಿಮೆ ಇದ್ದ ಕಾರಣ ನಾನು ಆತನ ಜೊತೆ ಸರಿಯಾಗಿ ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಆರೋಪಿ ನಮಗೆ ಕಿರುಕುಳ ನೀಡಿದ ಕಾರಣ ನಾನು ನನ್ನ ಮಕ್ಕಳನ್ನು ಕರೆದುಕೊಂಡು ಬಾಗೇಪಲ್ಲಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೆನು ಎಂದು ನುಡಿದಿರುತ್ತಾರೆ. ಚಾಸಾ.1 ಮೆಹಮದ್ ಯುಾಸುಫ್ ನನ್ನ ಜೊತೆ ವಿಶ್ವಾಸದಿಂದ ಇರುತ್ತಾರೆ ಎಂದರೆ ಸರಿ . ಆರೋಪಿ ಮೆಹಬೂಬ್ ಸಾಬ್ ಹಾಗೂ ನಜೀರ್ ಸಾಬ್ ಇವರನ್ನು ಪಿಸ್ತೂಲಿನಿಂದ ಹೊಡೆದು ಸಾಯಿಸಿರುವುದಾಗಿ ನನ್ನ ಮಗ ಹೈದರಾಬಾದ್ ನಿಂದ ಬೆ.5.45 ಕ್ಕೆ ಫೋನ್ ಮಾಡಿ ತಿಳಿಸಿರುತ್ತಾರೆ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಜಮೀನಿನ ವಿಚಾರವಾಗಿ ಆರೋಪಿಗೂ ಹಾಗೂ ಮೆಹಬೂಬ್ ಸಾಬ್ , ಅವರ ಮಗ ನಜೀರ್ ಅಹಮದ್ ಇವರ ನಡುವೆ ಗಲಾಟೆ ಇರುವ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ.

10. ಮೆಹಬೂಬ್ ಸಾಬ್ ಹಾಗೂ ಅವರ ಸಹೋದರರ ನಡುವೆ ಆಸ್ತಿ ವಿವಾದ ಬಗೆ ಹರಿಯದೇ ಇರುವ ಕಾರಣ ನಾವು ಆಸ್ತಿಯನ್ನು ಕೇಳಲು ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಅವರ ನಡುವೆ ಆಸ್ತಿಯ ವಿಚಾರವಾಗಿ ಜಗಳ ಇತ್ತು ಎಂದು ಉತ್ತರಿಸಿರುತ್ತಾರೆ. ಈ

ರೀತಿ ಜಗಳ ಆದ ಬಗ್ಗೆ ಪೊಲೀಸರಿಗೆ ಯಾರು ದೂರು ದಾಖಲಿಸಿಲ್ಲ. ಆಸ್ತಿ ಬೇಕು ಎಂದು ನಾನು ಯಾರ ಮೂಲಕವೂ ಪಂಚಾಯಿತಿ ಮಾಡಿಸಿಲ್ಲ. ಮೆಹಬೂಬ್ ಸಾಬ್ ಹಾಗೂ ಅವರ ಮಗ ನಜೀರ್ ಅಹಮದ್ ಇವರ ನಡುವೆ ಆಸ್ತಿ ವಿಚಾರವಾಗಿ ಗಲಾಟೆ ಆಗುತ್ತಿತ್ತು ಎಂದರೆ ಸಾಕ್ಷಿಯು ಮೊದಲಿಗೆ ಇಲ್ಲ ಎಂದು ನುಡಿದು ನಂತರ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಯು ಪುನಹಃ ಮುಂದುವರೆದು ತಂದೆ ಮಗ ಯಾವುದೇ ಸಮಯದಲ್ಲಿ ಜಗಳ ಆಡಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ಮಕ್ಕಳ ಸಲುವಾಗಿ ಮೆಹಬೂಬ್ ಸಾಬ್ ಹಾಗೂ ಆತನ ಮಗ ನಜೀರ್ ಅಹಮದ್ ದಾನಪತ್ರ ಬರೆದುಕೊಟ್ಟ ವಿಚಾರವನ್ನು ನೀವು ಪೊಲೀಸರ ಮುಂದೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಹೇಳಿರುವುದಾಗಿ ಉತ್ತರಿಸಿರುತ್ತಾರೆ.

11. ಮೆಹಬೂಬ್ ಸಾಬ್ ಇವರು ನಮ್ಮ ಮಕ್ಕಳ ಹೆಸರಿಗೆ ದಾನಪತ್ರ ಬರೆದುಕೊಟ್ಟ ಕಾರಣಕ್ಕಾಗಿ ನಜೀರ್ ಅಹಮದ್ ಇವರಿಗೆ ಆತನ ವಿರುದ್ಧ ಕೋಪ ಇತ್ತು ಎಂದರೆ ಸರಿಯಲ್ಲ. ಎಷ್ಟು ಎಕರೆ ಜಮೀನು ಇರುತ್ತದೆ, ಅದರ ಸನಂ. ಏನು ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ. ನನ್ನ ಮಗ ನನಗೆ ಫೋನ್ ಮಾಡಿ ಘಟನೆಯ ವಿಚಾರ ತಿಳಿಸಿದ ತಕ್ಷಣ ನಾನು ಹಂಪಸಂದ್ರ ಗ್ರಾಮಕ್ಕೆ ಹೋಗಿರುವುದಿಲ್ಲ ಆದರೆ ಸ್ವಲ್ಪ ಸಮಯದ ನಂತರ ಹೋಗಿರುತ್ತೇನೆ. ನನ್ನ ಮಗ ನನಗೆ ಫೋನ್ ಮಾಡಿದಾಗ ಆರೋಪಿ ನಜೀರ್ ಅಹಮದ್ ಹಾಗೂ ಮೆಹಬೂಬ್ ಸಾಬ್ ಇವರನ್ನು ಸಾಯಿಸಿದ್ದು ನಮ್ಮನ್ನು ಸಾಯಿಸಬಹುದು ಎಂದು ಹೇಳಿದ ವಿಚಾರವನ್ನು ಪೊಲೀಸರಿಗೆ ತಿಳಿಸಿರುತ್ತೇನೆ. ನನಗೆ ಘಟನೆಯ ವಿಚಾರ ತಿಳಿದ ತಕ್ಷಣ

ಹಂಪಸಂದ್ರ ಗ್ರಾಮಕ್ಕೆ ಹೋಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯ ಪೊಲೀಸರು ನಮ್ಮ ಮನೆಯ ಬಳಿ ಬಂದಿದ್ದು ನನ್ನ ಮಗ ಸಹಾ ಮನೆಯಲ್ಲಿ ಇಲ್ಲದಿದ್ದ ಕಾರಣ ಹಂಪಸಂದ್ರಕ್ಕೆ ಹೋಗಲು ತಡ ಆಗಿರುವುದಾಗಿ ಉತ್ತರಿಸಿರುತ್ತಾರೆ. ಪೊಲೀಲಸರು ನಮ್ಮ ಮನೆಯ ಬಳಿ ಯಾವ ಸಮಯಕ್ಕೆ ಬಂದಿರುತ್ತಾರೆ ಎಂದು ನನಗೆ ಭಯ ಇದ್ದ ಕಾರಣ ಸಮಯ ನೋಡಿರುವುದಿಲ್ಲ.

12. ನನ್ನ ಮಗ ನನಗೆ ಫೋನ್ ಮಾಡಿ ಆರೋಪಿ ನಮ್ಮ ಮನೆಯ ಬಳಿ ಬರುತ್ತಿರುವುದಾಗಿ ಹೇಳಿರುವುದನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರವನ್ನು ನನಗೆ ತಿಳಿಸಿಲ್ಲ. ನನಗೆ ಫೋನ್ ಮೂಲಕ ವಿಚಾರ ತಿಳಿದುಬಂದ ನಂತರ ಮೃತರಿಗೆ ಎಲ್ಲಿ ಯಾವ ರೀತಿ ಗಾಯ ಆಗಿರುತ್ತದೆ ಎಂದು ನನಗೆ ತಿಳಿಯಲಿಲ್ಲ ಎಂದರೆ ಸರಿ . ನಿಪಿ.4 ರಿಂದ 10 ರ ಫೊಟೋಗಳನ್ನು ನಾನು ಇದೇ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿ . ಸದರಿ ಫೊಟೋಗಳನ್ನು ಯಾರು ಯಾವ ಮೊಬೈಲ್ ನಿಂದ ತೆಗೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ . 2024 ನೇ ಇಸವಿ ಜುಲೈ ತಿಂಗಳಿನಲ್ಲಿ ಲೋಕಸಭಾ ಚುನಾವಣೆ ಇತ್ತು ಎಂದರೆ ಸರಿ . ಆ ಸಮಯದಲ್ಲಿ ಮೆಹಬೂಬ್ ಸಾಬ್ ಇವರು ಕಾಂಗ್ರೆಸ್ ಪಕ್ಷದ ಪರವಾಗಿ ಓಡಾಡುತ್ತಿದ್ದರು ಎಂದರೆ ಸರಿ . ಸದರಿ ಚುನಾವಣೆಯಲ್ಲಿ ನಜೀರ್ ಅಹಮದ್ ಇವರು ಜೆಡಿಎಸ್ ಪರವಾಗಿ ಓಡಾಡಿಕೊಂಡು ಆತನ ಅಪ್ಪನ ವಿರುದ್ಧ ಪ್ರಚಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ರಾಜಕೀಯ ವಿಚಾರ ನನಗೆ ತಿಳಿದಿಲ್ಲ ಎಂದು ಉತ್ತರಿಸಿರುತ್ತಾರೆ.

13. ಮೆಹಬೂಬ್ ಸಾಬ್ ಇವರ ಮನೆಯ ಕಷ್ಟಕ್ಕೆ ನಾನು ಹೋಗುತ್ತಿದ್ದ ವಿಚಾರ, ಅದೇ ರೀತಿ ನಮ್ಮ ಮನೆಯ ಕಷ್ಟಕ್ಕೆ ಅವರು ಬರುತ್ತಿದ್ದ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಬಾಡಿಗೆಗೆ ವಾಸ ಇರುವ ಮನೆಯ ಬಾಡಿಗೆ ಕರಾರು ದಾಖಲೆಯನ್ನು ಪೊಲೀಸರಿಗೆ ನೀಡಿಲ್ಲ. ಮೆಹಬೂಬ್ ಸಾಬ್ ಹಾಗೂ ನಾವು ಚೆನ್ನಾಗಿ ಇದ್ದೆವು ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನಾನು ಆರೋಪಿಯನ್ನು ಮಾತನಾಡಿಸದೇ ಇದ್ದ ಸಮಯದಲ್ಲಿ ನನ್ನ ಜೊತೆ ಬರುವಂತೆ ಆರೋಪಿ ನನ್ನನ್ನು ಕರೆದಿದ್ದರು ಎಂದರೆ ಸರಿಯಲ್ಲ. ನಾನು ಬಾಗೇಪಲ್ಲಿಯಲ್ಲಿ ಯಾವುದೇ ಬಾಡಿಗೆ ಮನೆಯಲ್ಲಿ ವಾಸ ಇಲ್ಲದೇ ಹಂಪಸಂದ್ರದಲ್ಲಿರುವ ಮೆಹಬೂಬ್ ಸಾಬ್ ಇವರ ಮನೆಯಲ್ಲಿ ವಾಸ ಇದ್ದೆನು ಎಂದರೆ ಸರಿಯಲ್ಲ. ಆರೋಪಿ ಸೌದಿಅರೇಬಿಯಾದಲ್ಲಿ ಕೆಲಸ ಮಾಡುತ್ತಿದ್ದು ನಮಗೆ ಹಣ ಸಹಾಯ ಮಾಡದೇ ಇದ್ದ ಕಾರಣ ಆತನ ವಿರುದ್ಧ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ.

14. ಈ ಘಟನೆ ಆಗಿರುತ್ತದೆ ಎಂದು ಹೇಳಿದ ಸಮಯದಲ್ಲಿ ಆರೋಪಿ ಹಂಪಸಂದ್ರದ ಮನೆಯಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿ ಕೃತ್ಯ ಮಾಡಿ ಬಾಗೇಪಲ್ಲಿಯಲ್ಲಿರುವ ನಮ್ಮ ಮನೆಯ ಹತ್ತಿರ ಇರುವ ಮನೆಗೆ ಬಂದಿದ್ದರು ಎಂದು ನುಡಿದಿರುತ್ತಾರೆ. ಹಂಪಸಂದ್ರದಲ್ಲಿ ನನ್ನ ಯಜಮಾನರು ಕಟ್ಟಿಸಿದ ಯಾವುದೇ ಸ್ವಂತ ಮನೆ ಇಲ್ಲ ಆದರೆ ನಮ್ಮ ಅತ್ತೆ ಮಾವ ಕಟ್ಟಿಸಿದ ಮನೆ ಇರುತ್ತದೆ. ನನ್ನ ಯಜಮಾನರು ನನ್ನ ಅತ್ತೆ ಮಾವನ ಮನೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಂಪಸಂದ್ರದ ಮನೆಯಲ್ಲಿ ಇಲ್ಲದ್ದಿದ್ದರೂ ಸಹಾ

ಚಾಸಾ.1 ರವರು ಹೇಳಿಕೊಟ್ಟ ಹಾಗೇ ನಾನು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿ ವಿಚಾರವಾಗಿ ಮೆಹಬೂಬ್ ಸಾಬ್ ಹಾಗೂ ನಜೀರ್ ಅಹಮದ್ ಪರಸ್ಪರ ಹೊಡೆದಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮೆಹಬೂಬ್ ಸಾಬ್ ಹಾಗೂ ನಜೀರ್ ಅಹಮದ್ ಇವರೊಂದಿಗೆ ನನಗೆ ವಿಶ್ವಾಸ ಇದ್ದ ಒಂದೇ ಕಾರಣಕ್ಕಾಗಿ ಆರೋಪಿಯೇ ಅವರಿಬ್ಬರನ್ನು ಕೊಲೆ ಮಾಡಿರುವುದಾಗಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮೆಹಬೂಬ್ ಸಾಬ್ ಹಾಗೂ ನಾನು ಹತ್ತಿರ ಸಂಬಂಧ ಹೊಂದದ್ದ ಕಾರಣ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

15. ನನಗೆ ಘಟನೆಯ ವಿಚಾರ ಯಾವುದೂ ತಿಳಿದಿಲ್ಲ, ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡದಿದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮೆಹಬೂಬ್ ಸಾಬ್ ಹಾಗೂ ನಜೀರ್ ಅಹಮದ್ ಗೆ ಹಲ್ಲೆ ಮಾಡಿ ಕೊಲೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 09.10.2025 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.